**ಎಸ್.ಸಿ. ನಂ. 36/2014**

**ದೋ.ಸಾ. : 48 ಪ್ರಾ.ಸಾ. : 23**

ಸಾಕ್ಷಿಯ ಹೆಸರು : ಪರಮೇಶ್ವರ ಸದಾನಂದ ಮಾಳ್ಸೇಕರ

**ದಿನಾಂಕಃ 15-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**(ಸದರಿ ಸಾಕ್ಷಿಯನ್ನು ವಿಚಾರಣೆ ಮಾಡಿದ ನಂತರ, ದಿ.09-04-2026 ರಂದು ಕದ್ರಾ ಪೊಲೀಸ್ ವೃತ್ತ ನಿರೀಕ್ಷಕರು ಹೆಚ್ಚುವರಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು, ಅದರಲ್ಲಿ ಈ ಸಾಕ್ಷಿಯ ಹೆಸರನ್ನು ಪುನಃ ನಮೂದಿಸಿ, ಮೊಬೈಲ್ ಸಿ.ಡಿ.ಆರ್. ನ್ನು ವಿಶ್ಲೇಷಣೆಗೊಳಪಡಿಸಿದ ಬಗ್ಗೆ ಸಾಕ್ಷ್ಯನುಡಿಯುತ್ತಾರೆಂದು ನಮೂದಿಸಿರುವ ಕಾರಣ, ಸಾಕ್ಷಿಯನ್ನು ಪುನಃ ಕರೆಸಿ ವಿಚಾರಣೆ ಮಾಡಲಾಯಿತು.)**

**ಮುಂದುವರಿದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

11. ನನಗೆ ಕಂಪ್ಯೂಟರ್ ಬಳಸುವ ಜ್ಞಾನವಿರುತ್ತದೆ. ಈ ಬಗ್ಗೆ ಇಲಾಖಾ ವತಿಯಿಂದ ತರಬೇತಿಯನ್ನು ನೀಡಲಾಗಿರುತ್ತದೆ ಹಾಗೂ ಅದು ನಮ್ಮ ಸೇವಾ ಪುಸ್ತಕದಲ್ಲಿ ದಾಖಲಾಗಿರುತ್ತದೆ. ಈ ಪ್ರಕರಣದ ತನಿಖಾಧಿಕಾರಿಯಾದ ಚಾಸಾ-57 ರವರು ನನಗೆ ಆರೋಪಿಯ ಮೊಬೈಲ್ ನಂ.9663275728 ಹಾಗೂ ಮೃತ ವೇಲು ಬಳಸುತ್ತಿದ್ದ ಮೊಬೈಲ್ ನಂ.8088781823 ಮತ್ತು ಜಾನಕಿ ಮೊಬೈಲ್ ನಂ.9481061419 ಗಳ ಸಿ.ಡಿ.ಆರ್ ಮತ್ತು ಎಸ್.ಡಿ.ಆರ್. ಗಳನ್ನು ಪಡೆದುಕೊಳ್ಳಲು ಕೋರಿಕೆ ಪತ್ರವನ್ನಲು ಕಳುಹಿಸುವಂತೆ ಸೂಚಿಸಿದ ಮೇರೆಗೆ ನಾನು, ದಿ.15-02-2014 ರಂದು ಮೃತ ವೇಲು ಹಾಗೂ ಜಾನಕಿಯ ಮೊಬೈಲ್ ನಂಬರುಗಳ ಸಿ.ಡಿ.ಆರ್ ಮತ್ತು ಎಸ್.ಡಿ.ಆರ್ ಗಳನ್ನು ಒದಗಿಸುವಂತೆ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಚೆರೀಗೆ ಈ-ಮೇಲ್ ಮೂಲಕ ಕೋರಿಕೊಂಡಿರುತ್ತೇನೆ. ಆನಂತರ ದಿ.18-02-2014 ರಂದು ಆರೋಪಿಯ ಸಿ.ಡಿ.ಆರ್ ಮತ್ತು ಎಸ್.ಡಿ.ಆರ್ ಗಳನ್ನು ಒದಗಿಸುವಂತೆ ಪುನಃ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಚೆರೀಗೆ ಈ-ಮೇಲ್ ಮೂಲಕ ಕೋರಿಕೊಂಡಿರುತ್ತೇನೆ.

12. ಆನಂತರ ದಿ.21-02-2014 ರಂದು ಜಿಲ್ಲಾ ಪೊಲೀಸ್ ಅಧೀಕ್ಷಕರ ಕಚೇರಿಯಿಂದ ಮೇಲೆ ಹೇಳಿದ ಎಲ್ಲಾ ಮೂರೂ ನಂಬರುಗಳ ಸಿ.ಡಿ.ಆರ್ ಮತ್ತು ಎಸ್.ಡಿ.ಆರ್ ಮಾಹಿತಿಯು ಈ-ಮೇಲ್ ಮೂಲಕ ಬಂದಿದ್ದು, ಆನಂತರ ನಾನು ಅದನ್ನು ಮುದ್ರಿಸಿ, ಪ್ರಿಂಟ್ ಮಾಡಿ, ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ ಹಾಗೂ ಈ ಬಾಗ್ಗೆ 65-ಬಿ ಪ್ರಮಾಣ ಪತ್ರವನ್ನು ಸಿ.ಡಿ

ಯೊಂದಿಗೆ ನೀಡಿರುತ್ತೇನೆ. ನಾವು ಪಡೆದುಕೊಂಡ ಎಸ್.ಡಿ.ಆರ್.ನಲ್ಲಿ ಆರೋಪಿಯು ಬಳಸುತ್ತಿದ್ದ ಮೊಬೈಲ್ ನಂಬರು, ಆತನ ತಂದೆಯ ಹೆಸರಿನಲ್ಲಿರುವವುದು ಕಂಡುಬಂದಿರುತ್ತದೆ. ಜಾನಕಿಯ ಮೊಬೈಲ್ ನಂಬರಿನ ಸಿ.ಡಿ.ಆರ್. ಹಾಗೂ ಎಸ್.ಡಿ.ಆರ್. ಮಾಹಿತಿಯನ್ನು, ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ–101 ಎಂದು ಗುರುತಿಸಲಾಯಿತು. ಮೃತ ವೇಲುವಿನ ಮೊಬೈಲ್ ನಂಬರಿನ ಸಿ.ಡಿ.ಆರ್. ಹಾಗೂ ಎಸ್.ಡಿ.ಆರ್. ಮಾಹಿತಿಯು 4 ಪುಟಗಳಲ್ಲಿದ್ದು, ಅದನ್ನು ಒಟ್ಟಾಗಿ ನಿಪಿ–102 ಎಂದು ಗುರುತಿಸಲಾಯಿತು. ಆರೋಪಿಯ ಮೊಬೈಲ್ ನಂಬರಿನ ಸಿ.ಡಿ.ಆರ್. ಹಾಗೂ ಎಸ್.ಡಿ.ಆರ್. ಮಾಹಿತಿಯು 5 ಪುಟಗಳಲ್ಲಿದ್ದು, ಅದನ್ನು ಒಟ್ಟಾಗಿ ನಿಪಿ–103 ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ನೀಡಿದ 65–ಬಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–104 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–104(ಎ) ಎಂದು ಹಾಗೂ ಸಿ.ಡಿ.ಯನ್ನು ನಿಪಿ–105 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ–**

13. ಕೋರಿಕೆ ಪತ್ರವನ್ನು ನಾನು ಕಳುಹಿಸಿದ ಈ–ಮೇಲ್ ನೊಂದಿಗೆ ಲಗತ್ತಿಸಿ ಕಳುಹಿಸಿರುತ್ತೇನೆ. ನಾನು ನೀಡಿದ 65–ಬಿ ಪ್ರಮಾಣ ಪತ್ರದಲ್ಲಿ ಸಿ.ಡಿ.ಆರ್. ಹಾಗೂ ಎಸ್.ಡಿ.ಆರ್. ಪ್ರಿಂಟ್ ಮಾಡಿದ ಕಂಪ್ಯೂಟರ್ ಹಾಗೂ ಪ್ರಿಂಟರಿನ ಮಾಹಿತಿಯು ಲಭ್ಯವಿರುವುದಿಲ್ಲ ಎಂದರೆ ಸರಿ. ಪ್ರಿಂಟ್ ಮಾಡುವ ಸಮಯದಲ್ಲಿ ಯಾವ ವಿಧಾನವನ್ನು ಬಳಸಲಾಗಿದೆ ಎಂದು ತಿಳಿಸಿಲ್ಲ ಎಂದರೆ ಸರಿ. ಕಂಪ್ಯೂಟರ್ ಹಾಗೂ ಪ್ರಿಂಟರಿನ ಮೇಲ್ವಿಚಾರಣೆಯನ್ನು ಸಿ.ಪಿ.ಐ. ಕಚೇರಿಯಲ್ಲಿ ಮಾಡಲಾಗುತ್ತದೆ. ಯಾವುದೇ ಕೋರಿಕೆ ಪತ್ರವನ್ನು ನಾನು ಈ–ಮೇಲ್ ಮುಖಾಂತರ ಕಳುಹಿಸಿಲ್ಲ ಹಾಗೂ ಈ ಪ್ರಕರಣಕ್ಕೆ ಸಂಬಂಧಿಸಿದ ಎಸ್.ಡಿ.ಆರ್. ಹಾಗೂ ಸಿ.ಡಿ.ಆರ್. ಗಳನ್ನು ಕಂಪ್ಯೂಟರ್ ಮೂಲಕ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಸದರಿ ಎಸ್.ಡಿ.ಆರ್. ಹಾಗೂ ಸಿ.ಡಿ.ಆರ್. ಗಳನ್ನು ಈ ಪ್ರಕರಣದಲ್ಲಿ ಸೃಷ್ಠಿ ಮಾಡಿರುತ್ತೇನೆ ಹಾಗೂ ಅದಕ್ಕೆ ಪೂರಕವಾಗುವಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ